

ಸಂಸ್ಥೆಗಳು, ಬಯೊ ಡಿಗ್ರೇಡಬಲ್ ಅಥವಾ ಕರಗಬಲ್ಲ ಪ್ಲಾಸ್ಟಿಕ್ ಕೂಡ ಏಕಬಳಕೆಯದ್ದಾಗಿದ್ದರೆ ಅದನ್ನೂ ನಿಷೇಧಿಸಿವೆ.

ಬಯೊ ಡಿಗ್ರೇಡಬಲ್ ಪ್ಲಾಸ್ಟಿಕ್ ಉತ್ಪನ್ನಗಳ ನಿರ್ವಹಣೆಗೂ ಈಗಾಗಲೇ ಅಮೆರಿಕದಲ್ಲಿ ಹಲವು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. 2011ರಲ್ಲಿ ಕ್ಯಾಲಿಫೋರ್ನಿಯಾ ಮತ್ತು 2018ರಲ್ಲಿ ಮೇರಿಲ್ಯಾಂಡ್ ರಾಜ್ಯವು, ಪ್ಲಾಸ್ಟಿಕ್ ಉತ್ಪನ್ನಗಳ ಮೇಲೆ, ನಿಯಮಬಾಹಿರವಾಗಿ ‘ಬಯೊ ಡಿಗ್ರೇಡಬಲ್’ ಎಂಬ ಲೇಬಲ್‌ಹಾಕಿ ಗ್ರಾಹಕರಿಗೆ ತಪ್ಪು ಮಾಹಿತಿ ನೀಡುವುದನ್ನು ಶಿಕ್ಷಾರ್ಹ ಅಪರಾಧ ಎಂದು ಪರಿಗಣಿಸಿದ್ದು, ಕಠಿಣ ಕ್ರಮದ ನಿಯಮಗಳನ್ನೂ ರೂಪಿಸಿದೆ.

## ಸ್ಫೂರ್ತಿದಾಯಕ ಉದಾಹರಣೆಗಳು

ಪರಿಸರವನ್ನು ಪ್ಲಾಸ್ಟಿಕ್ ಕಂಟಕದಿಂದ ಪಾರು ಮಾಡುವ ನಿಟ್ಟಿನಲ್ಲಿ, ಹಲವು ಸ್ಫೂರ್ತಿದಾಯಕ ಉದಾಹರಣೆಗಳು ನಮ್ಮ ಮುಂದೆಯೇ ಇವೆ.

ಮೈಸೂರಿನಲ್ಲಿರುವ ರಕ್ಷಣಾ ಆಹಾರ ಸಂಶೋಧನಾ ಪ್ರಯೋಗಾಲಯವು (ಡಿಎಫ್‌ಆರ್‌ಎಲ್) ಬಯೊ ಡಿಗ್ರೇಡಬಲ್ ಪ್ಲಾಸ್ಟಿಕ್ ಚೀಲವನ್ನು ಸಂಶೋಧಿಸಿದೆ. ಐದು ಕೆಜಿ ತೂಕದ ವಸ್ತುಗಳನ್ನು ತಡೆದುಕೊಳ್ಳುವ ಸಾಮರ್ಥ್ಯವನ್ನು ಈ ಚೀಲಗಳು ಹೊಂದಿವೆ.

ನೈಸರ್ಗಿಕವಾಗಿ ದೊರೆಯುವ ಪಾಲಿಲ್ಯಾಕ್ಟಿಕ್ ಆಮ್ಲ, ಪಾಲಿಪೆಟ್‌ನಿಂದ ಚೀಲವನ್ನು ತಯಾರಿಸಲಾಗಿದ್ದು, ಇವು ಮಣ್ಣಿನಲ್ಲಿ ಸುಲಭವಾಗಿ ಕರಗುತ್ತವೆ. ಈ ಚೀಲಗಳು ಪ್ಲಾಸ್ಟಿಕ್ ಬ್ಯಾಗ್‌ನಂತೆಯೇ ಕಂಡರೂ ಮಣ್ಣು ಹಾಗೂ ನೀರಿನಲ್ಲಿ 180 ದಿನಗಳಲ್ಲಿ ಸಂಪೂರ್ಣ ಕೊಳೆಯುತ್ತವೆ. ಇವುಗಳನ್ನು ಮನೆಯಲ್ಲಿಯೇ ಕರಗಿಸಿ ಗೊಬ್ಬರವಾಗಿಸಬಹುದು.

ನೈಸರ್ಗಿಕವಾಗಿ ಕೊಳೆಯುವ ಬಟ್ಟೆ ಹಾಗೂ ಇತರ ಬ್ಯಾಗ್‌ಗಳಿಗೆ ಮಾರುಕಟ್ಟೆಯಲ್ಲಿ ₹10 ರಿಂದ ₹15 ಇದ್ದರೆ, ಡಿಎಫ್‌ಆರ್‌ಎಲ್‌ನ ಬ್ಯಾಗ್ ಅನ್ನು ₹2ಕ್ಕೆ ಸಂಸ್ಥೆ ನೀಡುತ್ತಿದೆ. ಮೊದಲ ಹಂತದಲ್ಲಿ, ಚಾಮುಂಡೇಶ್ವರಿ ದೇಗುಲ, ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯ, ಶ್ರೀರಂಗಪಟ್ಟಣದ ರಂಗನಾಥಸ್ವಾಮಿ ದೇವಾಲಯ ಸೇರಿದಂತೆ ಪ್ರಮುಖ ದೇವಾಲಯಗಳಿಗೆ ಈ ಚೀಲಗಳನ್ನು ನೀಡಲಾಗುತ್ತಿದ್ದು, ಪರಿಸರ ಜಾಗೃತಿಯನ್ನು ಮೂಡಿಸಲಾಗುತ್ತಿದೆ.

ಮುಜರಾಯಿ ಇಲಾಖೆಯ ಮೂಲಕ ರಾಜ್ಯದ ಎಲ್ಲ ದೇವಸ್ಥಾನಗಳಲ್ಲಿ ಇವುಗಳನ್ನು ವಿತರಿಸುವ ಚಿಂತನೆಯಲ್ಲಿ ಸಂಸ್ಥೆ ಇದೆ. ಇಂತಹ ಚೀಲಗಳನ್ನು ಯಾವ ಸಂಸ್ಥೆಗಳು ಪೂರೈಸಬಹುದು ಎಂಬ ಮಾಹಿತಿ ಸಂಗ್ರಹಿಸಿ, ಅವುಗಳ ವಿಳಾಸವನ್ನು ಸರ್ಕಾರಕ್ಕೆ ಡಿಎಫ್‌ಆರ್‌ಎಲ್ ನೀಡಿದೆ. ಸಂಬಂಧಪಟ್ಟ ದೇವಸ್ಥಾನದವರು, ಟೆಂಡರ್ ಕರೆದು, ಈ ಸಂಸ್ಥೆಗಳ ಮೂಲಕ ಚೀಲಗಳನ್ನು ಪಡೆಯಬಹುದು. ಅಲ್ಲದೆ, ಈ ಬಯೊ ಡಿಗ್ರೇಡಬಲ್ ಚೀಲ ತಯಾರಿಕೆ ತಂತ್ರಜ್ಞಾನವನ್ನು ಆಸಕ್ತ ಕಂಪನಿಗಳು ಕೇಳಿದರೆ, ಅವುಗಳೊಂದಿಗೆ ಹಂಚಿಕೊಳ್ಳಲು ಸಂಸ್ಥೆ ಸಿದ್ಧವಿದೆ. ಆದರೆ, ಇದಕ್ಕಾಗಿ, ನಿರ್ದಿಷ್ಟ ರಾಯಧನವನ್ನು (ರಾಯಲ್ಟಿ) ಕಂಪನಿಗಳು ನೀಡಬೇಕಾಗುತ್ತದೆ.

### ಬೀಳಲಿದೆ ಭಾರೀ ದಂಡ!

ಚಿಲ್ಲರೆ ವ್ಯಾಪಾರಿಗಳು ನಿಷೇಧಿತ ಪ್ಲಾಸ್ಟಿಕ್‌ಗಳನ್ನು ಬಳಸಿದರೆ ಮೊದಲ ಬಾರಿ 200, ಎರಡನೇ ಬಾರಿ 500 ಮತ್ತು ಮೂರನೇ ಬಾರಿ 1,000 ದಂಡ ವಿಧಿಸಲಾಗುತ್ತದೆ. ಇದೇ ರೀತಿ ತಯಾರಕರಿಗೆ ಮೊದಲ ಬಾರಿ 5 ಸಾವಿರ, ಎರಡನೇ ಬಾರಿಗೆ 10 ಸಾವಿರ ಮತ್ತು ಮೂರನೇ ಬಾರಿಗೆ 20 ಸಾವಿರ ದಂಡ ವಿಧಿಸಲಾಗುವುದು. ಉತ್ಪಾದನೆ ಮುಂದುವರಿಸಿದರೆ ಪ್ಲಾಸ್ಟಿಕ್‌ಗಳನ್ನು ವಶಪಡಿಸಿಕೊಳ್ಳುವ ಜತೆ ಘಟಕಗಳನ್ನು ಮುಚ್ಚಲು ಕ್ರಮ ಕೈಗೊಳ್ಳಲಾಗುವುದು. 5 ವರ್ಷಗಳ ಕಾಲ ವಿಸ್ತರಿಸಬಹುದಾದ ಜೈಲು ಶಿಕ್ಷೆಯನ್ನೂ ವಿಧಿಸಬಹುದಾದ ಅವಕಾಶ ಕಾನೂನಿನಲ್ಲಿದೆ.

ಮೇಲಿನದು, ಸಂಸ್ಥೆಯೊಂದರ ಪರಿಸರ ಕಾಳಜಿಯ ಕಥೆಯಾದರೆ, ವ್ಯಕ್ತಿಯೊಬ್ಬರು ಇಂತಹ ಕಳಕಳಿ ಹೊಂದಿದ್ದರೆ ವ್ಯವಸ್ಥೆಯಲ್ಲಿ ಏನೆಲ್ಲ ಬದಲಾವಣೆ ತರಬಹುದು ಎಂಬುದಕ್ಕೆ ಉದಾಹರಣೆಗೆ ಇರುವವರು ಶಿಕ್ಷಕ ಸಂತೋಷ ಗುಡ್ಡಿಯಂಗಡಿ.

ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕಿನ ಹೆಗ್ಗಡಹಳ್ಳಿ ಸರ್ಕಾರಿ ಪ್ರೌಢಶಾಲೆಯಲ್ಲಿ ಶಿಕ್ಷಕರಾಗಿರುವ ಸಂತೋಷ, ‘ನಿಮ್ಮ ಕಸ ನೀವೇ ವಾಪಸ್ ಪಡೆಯಿರಿ’ ಎಂಬ ಅಭಿಯಾನವನ್ನು ನಡೆಸಿದವರು. ಶಾಲಾ ವಿದ್ಯಾರ್ಥಿಗಳ ನೆರವಿನೊಂದಿಗೆ, ಪ್ಲಾಸ್ಟಿಕ್ ತ್ಯಾಜ್ಯವನ್ನು ಆಯ್ದು, ಆಯಾ ಕಂಪನಿಯ ಪ್ಲಾಸ್ಟಿಕ್ ಕವರ್‌ಗಳನ್ನು ಆಯಾ ಕಂಪನಿಗೆ, ಮಕ್ಕಳ ಸಹಿಯೊಂದಿಗೆ ರವಾನಿಸುವ ಮೂಲಕ ವಿಭಿನ್ನವಾಗಿ ಪರಿಸರ ಪ್ರೇಮ ಮೆರೆಯುತ್ತಿದ್ದಾರೆ.

‘2019ರಲ್ಲಿ ಈ ಕಾರ್ಯವನ್ನು ಆರಂಭಿಸಿದೆ. ಸುಮಾರು 50ರಿಂದ 75 ಗ್ರಾಂನಷ್ಟು ಪ್ಲಾಸ್ಟಿಕ್ ತ್ಯಾಜ್ಯವನ್ನು ಸಂಗ್ರಹಿಸಿ, ಆಯಾ ಕಂಪನಿಗೆ ಕೊರಿಯರ್ ಮಾಡುತ್ತೇವೆ. ಅದರಲ್ಲಿ ಮಕ್ಕಳ ಸಹಿಯೂ ಇರುತ್ತದೆ. ಮೊದಲು, ಕೋಲ್ಗೇಟ್ ಕಂಪನಿಯವರು ಪ್ರತಿಕ್ರಿಯಿಸಿದರು. ಮುಂಬೈ